MC No.8/2024

PW-1

**(ಇಂದು ದಿಃ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ಶ್ರೀ.VJM ವಕೀಲರಿಂದಃ-**

ನನ್ನ ಮತ್ತು ಎದರುದಾರನ ಮದುವೆ ಸುಮಾರು 20 ವರ್ಷಗಳ ಹಿಂದೆ ಆಗಿದೆ. ನಮಗೆ ಇಬ್ಬರು ಮಕ್ಕಳು . ಮದುವೆ ಆದ ನಂತರ ಎದರುದಾರ ನನ್ನ ತವರು ಮನೆಗೆ ಮನೆಯ ಅಳಿಯನಾಗಿ ಬಂದಿದ್ದ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವೆರದು ನಾನೇ ಅವರ ಮನೆಗೆ ಹೋಗಿದ್ದೆ ಎಂದು ಹೇಳುತ್ತಾರೆ . ಎದರುದಾರ ದೂಗನೂರ ಗ್ರಾಮದವರು. ನಾನು ಮುಂಚೆ 7 ನೇ ತರಗತಿಯವೆರೆಗ ಓದಿದ್ದೆ. ಮದುವೆ ಮಕ್ಕಳು ಆದ ಮೇಲೆ 10 ನೇ ತರಗತಿ ಪರೀಕ್ಷೆ ಬರೆದು ಪಾಸ್ ಆಗಿದ್ದೇನೆ. ಜಾಕನ್ ಪಲ್ಲಿಯ ಸರಕಾರಿ ಪ್ರೌಡ ಶಾಲೆಯಲ್ಲಿ 10 ನೇ ತರಗತಿ ಪಾಸ್ ಆಗಿದ್ದೇನೆ. ರುದ್ರವಾರ್ ಗ್ರಾಮದ ಸಾಯಪ್ಪ ಮತ್ತು ವೇಂಕಟಮ್ಮ ನನ್ನ ತಂದೆ ತಾಯಿ. ಅವರಿಬ್ಬರುಅವಿದ್ಯಾಯವಂತರ ಹೆಬ್ಬಟ್ಟಿ ನ ಗುರುತು ಹಾಕುತ್ತಾರೆ ಎಂದರೆ ಸರಿ. ನನ್ನ ಮತ್ತು ಎದರುದಾರನ ಮದುವೆ ಮುಂಚೆ ನನ್ನ ತಂದೆ ಮತ್ತು ಹಿರಿಯರು ಸೇರಿ ಎದರುದಾರನನ್ನು ಮನೆಯ ಅಳಿಯನಾಗಿ ಕರೆದುಕೊಂಡು ಬರೆಬೇಕು ಎಂದು ತೀರ್ಮಾನ ಮಾಡಿದ್ದರು ಎಂದರೆ ಸರಿಯಲ್ಲ, ಎದರುದಾರನ ತಂದೆ ಯ ಹೆಸರು ಬೋಜಪ್ಪ, ಹಿರಿಯರ ಸಮುಖದಲ್ಲಿ ಎಲ್ಲರು ಕೂಡಿಕೊಂಡು ಎದರುದಾರನನ್ನು ಮನೆಯ ಅಳಿಯನಾಗಿ ಕರೆದುಕೊಂಡು ಹೋಗಲು ಒಪ್ಪಿ ದ ನಂತರ ಮದುವೆ ಆಗಿದೆ ಎಂದರೆ ಸರಿಯಲ್ಲ, ಮದುವೆ ಆದ ನಂತರ ಎದರುದಾರ ನನ್ನ ತವರು ಮನೆಗೆ ಬಂದು ವ್ಯವಸಾಯ ಮತ್ತು ದನಕರ ಮೇಯಿಸುವುದು ಮಾಡಿದ್ದಾರೆ ಎಂದರೆ ಸರಿ. ಎದರುದಾರ ನನ್ನ ತವರು ಮನೆಯಲ್ಲಿ ಸುಮಾರು 8-9 ವರ್ಷ ಇದ್ದರು. ಸಾಕ್ಷಿ ಮುಂದುವರೆದು ಕಳೆದ 12 ವರ್ಷಗಳಿಂದ ಎದರುದಾರ ನನ್ನನ್ನು ದೂರ ಮಾಡಿದ್ದಾರೆ. ಎದರುದಾರ ನಮ್ಮ ಮನೆ ಯಲ್ಲಿ ಇದ್ದು ನಮ್ಮ ಮನೆಯಿ ವ್ಯವಸಾಯ ಮತ್ತು ದನಕರು ಎಲ್ಲಾ ನೋಡಿಕೊಳ್ಳುತ್ತಿದ್ದರು , ನಾನು SSLC ಪಾಸ್ ಆದ ನಂತರ ಅಂಗನವಾಡಿ ಸಹಾಯಕಿ ನೇಮಕಗೊಂಡ ನಂತರ ಎದರುದಾರನನ್ನು ಮನೆಯಿಂದ ಹೊರ ಹಾಕಿದ್ದೇವೆ ಎಂದರೆ ಸರಿಯಲ್ಲ, ನಾನು 2011 ರಲ್ಲಿ ಅಂಗನವಾಡಿ ಸಹಾಯಕಿ ಆಗಿ ನೇಮಕಗೊಂಡಿದ್ದೇನೆ ಎಂದರೆ ಸರಿ.

ನಾವು ಎದರುದಾರನನ್ನು ಮನೆಯಿಂದ ಹೊರ ಹಾಕಿದ ನಂತರ ಗ್ರಾಮದ ಹಿರಿಯರು ಪಂಚಾಯತಿ ಮಾಡಿ ಆತನನ್ನು ಮನೆಯಲ್ಲಿ ಇಟ್ಟುಕೊಳ್ಳುವಂತೆ ನನ್ನ ತಂದೆ ತಾಯಿಗೆ ಮತ್ತು ನನಗೆ ಸಲಹೆ ನೀಡಿದ್ದರು ಎಂದರೆ ಸರಿಯಲ್ಲ, ಮದುವೆ ಕಾಲಕ್ಕೆ ನನ್ನ ತಂದೆ ತಾಯಿ ಎದರುದಾರನಿಗೆ ಒಂದು ತೊಲೆ ಬಂಗಾರ , 21,000/- ಹಣ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಎದರುದಾರ ಯಾವತ್ತು ಮದ್ಯಪಾನ ಮಾಡುವುದಿಲ್ಲ , ನನಗೆ ಅವಾಚ್ಯ ಶಬ್ದಗಳಿಂದ

MC No.8/2024

PW-1

ಬೈದಿಲ್ಲ ಮತ್ತು ನನಗೆ ಹೊಡೆ ಬಡಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈಗ ಸ್ವಂತ ಸಂಪಾದನೆ ಮಾಡುತ್ತಿರುವುದರಿಂದ ಗಂಡ ಬೇಡ ಆಗಿದ್ದಾನೆ ಎಂದರೆ ಸರಿಯಲ್ಲ. ನಾನು ಎದರುದಾರನ ವಿರುದ್ದ ಸುಳ್ಳು ಅಪಾದನೆ ಮಾಡಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎದರುದಾರ ನನ್ನ ಮೇಲೆ ಅನುಮಾನ ಪಡುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಂಗನವಾಡಿ ಸಹಾಯಕಿ ಆಗಿರುವ ಕಾರಣ ನನಗೆ ತಿಂಗಳಿಗೆ 6,000/- ಗೌರವ ಧನ ಕೋಡುತ್ತಾರೆ . ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**